ಮಂಡ್ಯ ಜಿಲ್ಲಾ ಪೊಲೀಸ್

# ಪತ್ರಿಕಾ ಪ್ರಕಟಣೆ

**"ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರ ಕಾರ್ಯಾಚರಣೆ, ಮನೆಕಳವು ಪ್ರಕರಣದ ಆರೋಪಿಗಳ ಬಂಧನ, ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳ ವಶ"**

***********

ಸಂಕ್ಷಿಪ್ತ ಸಾರಾಂಶ

ಮಂಡ್ಯದ ಅನ್ನಪೂರ್ಣೇಶ್ವರಿ ನಗರದ ವಾಸಿ ಶ್ರೀಧರ್ ಎಂಬುವವರ ಮನೆಯಲ್ಲಿ ದಿನಾಂಕ: 24-12-2022 ರಂದು ರಾತ್ರಿ ಸಮಯದಲ್ಲಿ ಯಾರೋ ಕಳ್ಳರು ಮನೆಯ ಬೀಗ ಹೊಡೆದು ಮನೆಯೊಳಗೆ ಪ್ರವೇಶಿಸಿ ಕಳ್ಳತನಕ್ಕೆ ಪ್ರಯತ್ನಿಸಿರುತ್ತಾರೆ ಎಂದು ಪಿರ್ಯಾದಿಯವರು ನೀಡಿದ ದೂರಿನ ಮೇರೆಗೆ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಇದಲ್ಲದೇ ಮಂಡ್ಯ ತಾಲ್ಲೂಕಿನಾದ್ಯಂತ ಇತ್ತೀಚೆಗೆ ಮನೆಗಳವು ಪ್ರಕರಣಗಳು ವರದಿಯಾಗುತ್ತಿದ್ದ ಮೇರೆಗೆ ಮಂಡ್ಯ ಗ್ರಾಮಾಂತರ ಠಾಣಾ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿಯವರುಗಳನ್ನು ಒಳಗೊಂಡ ಪತ್ತೆ ತಂಡವನ್ನು ರಚನೆ ಮಾಡಲಾಗಿರುತ್ತದೆ.

ಆರೋಪಿಗಳ ಪತ್ತೆ ತಂಡವು ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು ತನಿಖಾ ಕಾಲದಲ್ಲಿ ಉಡುಪಿ, ಶಿವಮೊಗ್ಗ, ಮುಂಬೈ ಹಾಗೂ ಮಂಡ್ಯದ ಹೊಸಹಳ್ಳಿ ಮೂಲದ ಒಟ್ಟು ನಾಲ್ಕು ಜನ ಆರೋಪಿಗಳನ್ನು ಪತ್ತೆಮಾಡಿ ವಶಕ್ಕೆ ಪಡೆದು ಆರೋಪಿಗಳಿಂದ ಅಂದಾಜು **11,00000 (ಹನ್ನೊಂದು ಲಕ್ಷ) ರೂ ಮೌಲ್ಯದ 183 ಗ್ರಾಂ ಚಿನ್ನಾಭರಣ ಮತ್ತು 3150 ಗ್ರಾಂ ಬೆಳ್ಳಿಯ ಪದಾರ್ಥಗಳನ್ನು** ಹಾಗೂ ಆರೋಪಿಗಳು ಕೃತ್ಯವೆಸಗಲು ಬಳಸುತ್ತಿದ್ದ ಹೋಂಡಾ ಬ್ರಿಯೋ ಕಾರನ್ನು ವಶಪಡಿಸಿಕೊಳ್ಳಲಾಗಿರುತ್ತದೆ.

ಆರೋಪಿಗಳ ಬಂಧನದಿಂದಾಗಿ ಈ ಕೆಳಕಂಡ ಒಟ್ಟು 9 ಪ್ರಕರಣಗಳು ಪತ್ತೆಯಾಗಿರುತ್ತವೆ.

| ಕ್ರ.ಸಂ | ಪೊಲೀಸ್ ಠಾಣೆ. | ಮೊ.ನಂ. & ಕಲಂ |
|---|---|---|
| 1. | ಮಂಡ್ಯ ಗ್ರಾಮಾಂತರ ಠಾಣೆ | ಮೊ.ಸಂ: 395/2022, ಕಲಂ: 457, 380, 511 ಐಪಿಸಿ |
| 2. | ಮಂಡ್ಯ ಗ್ರಾಮಾಂತರ ಠಾಣೆ | ಮೊ.ಸಂ: 391/2022, ಕಲಂ: 457, 384 ಐಪಿಸಿ |
| 3. | ಮಂಡ್ಯ ಗ್ರಾಮಾಂತರ ಠಾಣೆ | ಮೊ.ಸಂ: 184/2022, ಕಲಂ: 457, 380 ಐಪಿಸಿ |
| 4. | ಮಂಡ್ಯ ಗ್ರಾಮಾಂತರ ಠಾಣೆ | ಮೊ.ಸಂ: 185/2022, ಕಲಂ: 457, 380 ಐಪಿಸಿ |
| 5. | ಮಂಡ್ಯ ಗ್ರಾಮಾಂತರ ಠಾಣೆ | ಮೊ.ಸಂ: 240/2022, ಕಲಂ: 454, 457, 380 ಐಪಿಸಿ |
| 6. | ಮಂಡ್ಯ ಪೂರ್ವ ಠಾಣೆ | ಮೊ.ಸಂ: 6/2023, ಕಲಂ: 454, 457, 380 ಐಪಿಸಿ |
| 7. | ಮಂಡ್ಯ ಸೆಂಟ್ರಲ್ ಠಾಣೆ | ಮೊ.ಸಂ: 40/2022, ಕಲಂ: 454, 457, 380 ಐಪಿಸಿ |
| 8. | ಕೆರಗೋಡು ಠಾಣೆ | ಮೊ.ಸಂ: 15/2022 ಕಲಂ: 454, 380 ಐಪಿಸಿ |
| 9. | ಪಾಂಡವಪುರ ಠಾಣೆ | ಮೊ.ಸಂ: 60/2022 ಕಲಂ: 454, 457, 380 ಐಪಿಸಿ |

ಮಂಡ್ಯ ಗ್ರಾಮಾಂತರ ಠಾಣಾ ಅಧಿಕಾರಿ ಮತ್ತು ಸಿಬ್ಬಂದಿಯವರ ಈ ಪತ್ತೆ ಕಾರ್ಯವನ್ನು ಮಾನ್ಯ ಮಂಡ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶ್ಲಾಘಿಸಿ ಪ್ರಶಂಸಿಸಿರುತ್ತಾರೆ.

29/01/2023

ಪೊಲೀಸ್ ಅಧೀಕ್ಷಕರು
ಮಂಡ್ಯ ಜಿಲೆ

